ಮತ್ತು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಹಾಗೂ ಬೀಜ ನಿಗಮದ ಅಧಿಕಾರಿಗಳು ಮತ್ತು ಎನ್‌ಡಿಡಿಬಿ ಅಧಿಕಾರಿಗಳನ್ನು ಕರೆದು ಸಭೆ ಮಾಡುತ್ತೇನೆ. ನಮ್ಮ ಸರ್ಕಾರದಿಂದ ಎನ್‌ಡಿಡಿಬಿ ಗೆ ಯಾವುದೇ ಸಹಾಯ ಮತ್ತು ಖಾತ್ರಿ ಹಾಗೂ ಷೇರು ಸಹ ಕೊಟ್ಟಿಲ್ಲ. ಅವರಿಗೆ 1.93 ಕೋಟಿ ರೂಪಾಯಿಗಳನ್ನು ನಬಾರ್ಡ್‌ನಿಂದ ಮಾತ್ರ ಕೊಟ್ಟಿದ್ದಾರೆ. ನಾನೂ ಈಗಾಗಲೇ ಹೇಳಿದ ಹಾಗೆ ಅವರೆಲ್ಲರನ್ನು ಕರೆದು ಚರ್ಚೆ ಮಾಡಿ, ಇಲ್ಲಿ ಆಗಿರತಕ್ಕಂಥ ಅವ್ಯವಹಾರದ ಬಗ್ಗೆ ನಾನು ಶೀಘ್ರ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಆ ವರದಿಯನ್ನು ಪೂರ್ಣಗೊಳಿಸಿ ಅದರಲ್ಲಿ ಆರೋಪಗಳು ಏನಾದರೂ ಸಾಬೀತಾದರೆ ಖಂಡಿತ ಸೂಪರ್‌ಸೀಡ್ ಮಾಡುವುದಕ್ಕೂ ಸಹ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ:– ಇದನ್ನು ತಾವು ಲೋಕಾಯುಕ್ತಕ್ಕೆ ರೆಫರ್ ಮಾಡಿ. ಅವರು ಕಮರ್ಷಿಯಲ್ ಸೀಡ್ಸ್ ಎಂದು ಬೀಜವನ್ನು ಖರೀದಿ ಮಾಡಿದ್ದಾರೆ. ಇಷ್ಟೆಲ್ಲಾ ಹೇಳಿದ ಮೇಲೂ ಕೂಡ ನೀವು ಈ ರೀತಿ ನರ್ಧಾರ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು: ಆಯಿತು ಬಿಡಿ. ಮತ್ತೆ ಚರ್ಚೆಗೆ ಅವಕಾಶವಿಲ್ಲ. ಎಲ್ಲರ ಜೊತೆ ಸಭೆ ಮಾಡಿ ನಿರ್ಧಾರ ಮಾಡುತ್ತೇನೆಂದು ಸಚಿವರು ಹೇಳಿದ್ದಾರೆ. ಆದ್ದರಿಂದ, ನೀವೆಲ್ಲಾ ಕುಳಿತು ಸಭೆ ಮಾಡಿ ಅದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಮತ್ತೆ ಚರ್ಚೆಗೆ ಅವಕಾಶ ಇಲ್ಲ.

**1. ವಿಷಯ:– ಖಾನಾಪುರ ಗ್ರಾಮ ಪಂಚಾಯಿತಿಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ.**

ಡಾ.ವೀರಬಸವಂತ ರೆಡ್ಡಿ ಮುದ್ನಾಳ್:– ಶಹಾಪುರ ತಾಲ್ಲೂಕು ಖಾನಾಪುರ ಗ್ರಾಮ ಪಂಚಾಯಿತಿಯಲ್ಲಿನ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆ, ಶಹಾಪುರ ತಾಲ್ಲೂಕು, ಖಾನಾಪುರ ಗ್ರಾಮ ಪಂಚಾಯಿತಿಯಲ್ಲಿ ಸರ್ಕಾರಿ ಅನುದಾನ ರೂ,

50,000–00 ಗಳನ್ನು ಖಾಸಗಿ ವ್ಯಕ್ತಿಗೆ ನೀಡುವುದರ ಬಗ್ಗೆ ದೂರು ಬಂದಿದ್ದು, ದಿನಾಂಕ: 4–7–2007 ರಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳು ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಭೇಟಿ ನೀಡಿ, ಅಧ್ಯಕ್ಷರು, ಸದಸ್ಯರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ವಿಚಾರಣೆ ನಡೆಸಿರುತ್ತಾರೆ. ವಿಚಾರಣೆಯಲ್ಲಿ ರೂ. 50,000–00 ಗಳನ್ನು ಖಾಸಗಿ ಕಾರ್ಯಕ್ರಮಕ್ಕೆ ನೀಡಿರುವುದು ದೃಢಪಟ್ಟಿರುತ್ತದೆ. ಈ ಬಗ್ಗೆ ಸಂಬಂಧಿಸಿದ ಕಾರ್ಯದರ್ಶಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳು ಗುಲ್ಬರ್ಗಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದು, ದಿನಾಂಕ: 27–7–2007 ರಂದು ಗುಲ್ಬರ್ಗಾ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ (ಅಭಿವೃದ್ಧಿ) ರವರು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಶ್ರೀ ಸಿದ್ದಣ್ಣ ಗುಳಗಿ ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಆದೇಶಿಸಿರುತ್ತಾರೆ.

ಡಾ.ವೀರಬಸಂತ ರೆಡ್ಡಿ ಮುದ್ನಾಳ್:– ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಯ ಅಭಿವೃದ್ಧಿಗೋಸ್ಕರ ಗ್ರಾಮ ಪಂಚಾಯಿತಿಯಲ್ಲಿ ಹಣ ಇಟ್ಟಿರುತ್ತಾರೆ. ಇಲ್ಲಿ ಏನಾಗಿದೆ ಎಂದರೆ, ಯಾರೋ ಒಬ್ಬ ಪುಡಾರಿ ಅಲ್ಲಿನ ಕಾರ್ಯದರ್ಶಿಗೆ ದಮ್ಕಿ ಕೊಟ್ಟಿದ್ದರಿಂದ, ಕಾರ್ಯದರ್ಶಿ ಆತನಿಗೆ 50 ಸಾವಿರ ರೂಪಾಯಿಯ ಚೆಕ್ ಕೊಟ್ಟಿದ್ದಾನೆ. ಈ ಚೆಕ್ ಕೊಟ್ಟು ಮೂರು ತಿಂಗಳು ಆಗಿದ್ದರೂ ಸಹ ಬೇರೆ ಯಾರಿಗೂ ಸಹ ಗೊತ್ತಿರಲಿಲ್ಲ. ಅಕಸ್ಮಾತ್ ಈ ವಿಷಯ ನನಗೆ ತಿಳಿಯಿತು. ನಾನು ಈ ಸಂದರ್ಭದಲ್ಲಿ ಕೇಳುವುದೇನೆಂದರೆ, ಗ್ರಾಮ ಪಂಚಾಯಿತಿಯಲ್ಲಿರುವ ಹಣವನ್ನು ಯಾವ ರೀತಿಯಾಗಿ ಉಪಯೋಗವಾಗುತ್ತದೆಂದು ಪರಿಶೀಲನೆ ಮಾಡುವುದಕ್ಕೆ ಯಾರೂ ಕೂಡ ಇಲ್ಲ. ಆದ್ದರಿಂದ, ಹಣವನ್ನು ಯಾವ್ಯಾವ ಕೆಲಸಕ್ಕೆ ಉಪಯೋಗ ಮಾಡಿದ್ದಾರೆಂದು ಪಾಸ್ ಬುಕ್ ತೆಗೆದುಕೊಂಡು ಪ್ರತಿ ತಿಂಗಳು ಪರಿಶೀಲನೆ ಮಾಡಿದರೆ ಸ್ವಲ್ಪವಾದರೂ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರತಿ ಊರಿನಲ್ಲಿ ಪುಡಾರಿಗಳು ಬಂದು ಗ್ರಾಮ ಪಂಚಾಯಿತಿ ಹಣವನ್ನು ಕಿತ್ತುಕ್ಕೊಂಡು ಹೋಗುತ್ತಾರಷ್ಟೆ. ಈ ಪ್ರಕರಣದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯನ್ನು ಸಸ್ಪೆಂಡ್ ಮಾಡಿದ್ದೀರಿ. ಆದರೆ, ಆತ

ಅಂಜುಮುರುಕ, ಆತನದೇನು ಇದರಲ್ಲಿ ತಪ್ಪು ಇಲ್ಲ. ಕಾರ್ಯದರ್ಶಿ ಸಂಬಳದಿಂದ 50 ಸಾವಿರ ರೂಪಾಯಿಗಳನ್ನು ರಿಕವರಿ ಮಾಡುವುದರ ಬದಲು ಅಲ್ಲಿ ಹಣ ತೆಗೆದುಕೊಂಡಂಥ ಪುಡಾರಿಗಳು ಯಾರೆಂದು ಎಲ್ಲಾ ಅಧಿಕಾರಿಗಳಿಗೆ ಗೊತ್ತಿದೆ. ಆದ್ದರಿಂದ, ಅಲ್ಲಿನ EO ರವರಿಗೆ ಹೇಳಿ ಅವರ ಕಡೆಯಿಂದ 50 ಸಾವಿರ ರೂಪಾಯಿಗಳನ್ನು ವಸೂಲ್ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು, ಕ್ರಮ ತೆಗೆದುಕೊಳ್ಳದಿದ್ದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿಯೂ ಹಣ ಈ ರೀತಿಯಾಗಿ ದುರುಪಯೋಗವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಹೇಳುತ್ತಾ ಮುಂದೇನಾದರೂ ಈ ರೀತಿಯಾದರೆ ಸಂಬಂಧಪಟ್ಟಂಥ EO ರವರನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಿದಾಗ ಮಾತ್ರ ಅವರು ಸ್ವಲ್ಪ ಆಸಕ್ತಿ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಇದು ಕೈ ತಪ್ಪುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಸೀರಿಯಸ್ ಆಗಿ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ.ಸಿ.ಎಂ. ಉದಾಸಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 50 ಸಾವಿರ ರೂಪಾಯಿಗಳ ಮೊತ್ತದ ಚೆಕ್‌ನ್ನು ಪಾವತಿ ಮಾಡುವಾಗ ಗ್ರಾಮಪಂಚಾಯಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇಬ್ಬರು ಸೇರಿ ಸಹಿ ಮಾಡದಿದ್ದರೆ ಚೆಕ್‌ನಿಂದ ಹಣ ತೆಗೆಯುವುದಕ್ಕೆ ಬರುವುದಿಲ್ಲವೆಂಬುದು ನಮ್ಮೆಲ್ಲರ ಗಮನದಲ್ಲಿದೆ. ಇದರಲ್ಲಿ ಈ ಇಬ್ಬರು ಭಾಗಿಯಾಗಿದ್ದಾರೆಂದು ನಮ್ಮ ಗಮನಕ್ಕೆ ತಂದಿದ್ದಾರೆ. ಕೇವಲ ಇಲಾಖಾಧಿಕಾರಿಗಳ ಮೇಲೆ ನಾವು ಕ್ರಮ ತೆಗೆದುಕೊಂಡು ಚುನಾಯಿತ ಪ್ರತಿನಿಧಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, ಇವರಿಬ್ಬರು ಇದರಲ್ಲಿ ಭಾಗಿದಾರರಾಗಿದ್ದಾರೆಯೇ ಎನ್ನತಕ್ಕಂಥದರ ಬಗ್ಗೆ ಪರಿಶೀಲನೆ ಮಾಡಿ ಅವರ ಮೇಲೂ ಕೂಡ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಮತ್ತೆ ಇನ್ನು ಮುಂದೆ ಈ ರೀತಿಯಾಗಿ ಆಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೋಸ್ಕರ ತಾಲ್ಲೂಕು EO ಗಳಿಗೆ ಸೂಕ್ತ ನಿರ್ದೇಶನವನ್ನೂ ಸಹ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.